ತ್ತಿದ್ದಾರೆ. ೩೨೭೧ ಪ್ರಕರಣಗಳಲ್ಲಿ ಕಾಯಿದೆಯಿಂದ ಮನ್ನಾ ಮಾಡಲಾಗಿದೆಯೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಸ್ಪೆಸಿಫಿಕ್ ಕೇಸ್‌ನಲ್ಲಿ ಮಾತ್ರ ಮನ್ನಾ ಮಾಡಬೇಕೆಂದು ಅರ್ಬನ್ ಲ್ಯಾಂಡ್ ಸೀಲಿಂಗ್‌ನಲ್ಲಿ ಇದೆ. ಈ ವಿಚಾರದಲ್ಲಿ ವಿವರಣೆಬೇಕು.

ಶ್ರೀ ಎ. ಲಕ್ಷ್ಮೀಸಾಗರ್.— ಬೆಂಗಳೂರಿನಲ್ಲಿ ೧೯೫೬ ಎಕರೆಯಂನ್ನು ಈ ರೀತಿ ಹೆಚ್ಚುವರಿ ಜಮೀನನ್ನು ವಶಪಡಿಸಿಕೊಂಡಿದ್ದೇವೆ. ಇದನ್ನು ಯಾವ ರೀತಿಯಾಗಿ ವಿತರಣೆ ಮಾಡಬೇಕೆನ್ನುವುದಕ್ಕೆ ಜಿಲ್ಲಾಮಟ್ಟದಲ್ಲಿ ಒಂದು ಸಮಿತಿ ಇದೆ. ಆ ಸಮಿತಿಯವರು ಇಂತಹ ಜಮೀನನ್ನು ಸರ್ಕಾರ ಹಾಗೂ ಇತರ ಇಲಾಖೆಗಳು ಹೇಗೆ ಉಪಯೋಗಿಸಬೇಕೆಂದು ಶಿಫಾರಸ್ಸು ಮಾಡಿ ಕಳಿಸುತ್ತದೆ. ಅದನ್ನು ಸರ್ಕಾರ ಒಪ್ಪಿಕೊಳ್ಳುತ್ತದೆ.

ಶ್ರೀ ಕೆ. ಜೆ. ಜಾರ್ಜ್.— ತಮಗೆ ಗೊತ್ತಿರುವ ಹಾಗೆ ಬೆಂಗಳೂರಿನಲ್ಲಿ ಎಕ್ಸ್‌ಟ್ರಾ ಲ್ಯಾಂಡ್ಸ್ ಬೇಕಾದಷ್ಟು ಇರುವಾಗ ಬರಿ ೧೯೫೬ ಎಕರೆಯನ್ನು ವಶಪಡಿಸಿಕೊಂಡಿದ್ದೀರಿ, ಅಂದರೆ ಅರ್ಬನ್ ಲ್ಯಾಂಡ್ ಸೀಲಿಂಗ್ ಇಂಪ್ಲಿಮೆಂಟ್ ಆಗುತ್ತಿಲ್ಲವೇ ? ಗ್ರಾಮಾಂತರ ಪ್ರದೇಶಗಳಲ್ಲಿ ಈ ಅರ್ಬನ್ ಲ್ಯಾಂಡ್ ಸೀಲಿಂಗ್ ಅನ್ನು ಸ್ಟ್ರಿಕ್ ಆಗಿ ಇಂಪ್ಲಿಮೆಂಟ್ ಮಾಡುತ್ತಾರೆ. ಅದೇ ರೀತಿ ಇಲ್ಲೂ ಮಾಡ ಬೇಕು. ಇಲ್ಲಿ ಭ್ರಷ್ಟಾಚಾರ ನಡೆದಿದೆಯೆಂದು ನನಗನ್ನಿಸುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.— ಉಹಾಪೋಹದ ಆಪಾದನೆ ಮಾಡುವುದರಿಂದ ಏನೂ ಪ್ರಯೋಜನ ವಿಲ್ಲ. ಎಲ್ಲಿ ಭ್ರಷ್ಟಾಚಾರ ನಡೆದಿದೆಯೆಂದು ಸ್ಪೆಸಿಫಿಕ್‌ಆಗಿ ನನಗೆ ಹೇಳಿದರೆ ಅದನ್ನು ಪರಿಶೀಲಿಸುತ್ತೇನೆ. ಬೆಂಗಳೂರಿನಲ್ಲಿ ೧೯೫೬ ಇದೆಯೆಂದು ಹೇಳಿದ್ದೇನೆ.

ದಾವಣಗೆರೆಯಲ್ಲಿ ಬಸ್ ನಿಲ್ದಾಣ ಕಟ್ಟುವ ಬಗ್ಗೆ.

೧೨೮೬. ಶ್ರೀ ಪಂಪಾಪತಿ (ದಾವಣಗೆರೆ) — ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿ ಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ದಾವಣಗೆರೆ ಬಸ್ ನಿಲ್ದಾಣ ಕಟ್ಟಲು ಪ್ರಾರಂಭಿಸಿ ಎಷ್ಟು ದಿನಗಳಿಗೆ ಮುಗಿಸಬೇಕಾಗಿತ್ತು ?

ಆ) ವಿಳಂಬವಾಗಲು ಕಾರಣವೇನು, ಹಾಗೂ ಯಾವಾಗ ಮುಗಿಸಲಾಗುವುದು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು).—

ಅ) ನವೆಂಬರ್ ೧೯೮೩ರಲ್ಲಿ ಪ್ರಾರಂಭಿಸಿ ಡಿಸೆಂಬರ್ ೧೯೮೫ರ ವೇಳೆಗೆ ಮುಗಿಸಬೇಕಾಗಿತ್ತು.

ಆ) ಭೂ ಸ್ವಾಧೀನದಲ್ಲಿ ಆಗುತ್ತಿರುವ ವಿಳಂಬ, ಉಕ್ಕು ಮತ್ತು ಸಿಮೆಂಟ್ ಸರಿಯಾದ ವೇಳೆಗೆ ಸರಬರಾಜಾಗದೆ ಇರುವುದರಿಂದ ನಿರ್ಮಾಣ ಕಾರ್ಯವು ನಿಧಾನವಾಗಿದೆ. ವಿವಾದದ ಜಮೀನಿನಲ್ಲಿರುವ ಕಟ್ಟಡದ ಭಾಗವನ್ನು ಬಿಟ್ಟು ಡಿಸೆಂಬರ್ ೧೯೮೬ರ ಅಂತ್ಯದ ವೇಳೆಗೆ ನಿರ್ಮಾಣ ಕಾರ್ಯವು ಪೂರ್ಣ ಗೊಳ್ಳುವ ನಿರೀಕ್ಷೆ ಇದೆ.

ಶ್ರೀ ಪಂಪಾಪತಿ.— ಮಾನ್ಯ ಅಧ್ಯಕ್ಷರೇ, ಈಗ ಉಕ್ಕು ಮತ್ತು ಸಿಮೆಂಟ್ ಸರಿಯಾದ ವೇಳೆಗೆ ಸಿಗದೇ ಇರುವುದರಿಂದ ೧೯೮೫ಕ್ಕೆ ಮುಗಿಯಬೇಕಾದ್ದನ್ನು ೮೬ಕ್ಕೆ ಮುಗಿಸುತ್ತೇವೆಂದು ಹೇಳುತ್ತಾರೆ. ದಾವಣಗೆರೆಗೆ ಬಸ್ ನಿಲ್ದಾಣ ತುಂಬಾ ಅಗತ್ಯ, ಅಲ್ಲಿ ಜನಸಂಖ್ಯೆ ಜಾಸ್ತಿಯಿರುವುದರಿಂದ ಬಹಳ ತೊಂದರೆ ಯಾಗಿದೆ. ೧೯೮೬ಕ್ಕಾದರೂ ಮುಗಿಸಲು ಅದಕ್ಕೆ ಬೇಕಾದಂತಹ ಉಕ್ಕು, ಸಿಮೆಂಟ್ ಅನ್ನು ಒದಗಿಸಿ ಅದನ್ನು ಮುಗಿಸತಕ್ಕಂತಹ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ೮೬ರ ಕೊನೆಯ ಹೊತ್ತಿಗೆ ಮುಗಿಸಲು ಪ್ರಯತ್ನ ಮಾಡುತ್ತೇವೆ

ಹುಬ್ಬಳ್ಳಿ–ಧಾರವಾಡ ನಗರಪಾಲಿಕೆ ಮನೆಗಳಲ್ಲಿ ಅನಧಿಕೃತವಾಗಿ ವಾಸಿಸುತ್ತಿರುವವರನ್ನು ಖಾಲಿ ಮಾಡಿಸುವ ಬಗ್ಗೆ.

೭೯೨. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆಯಿಂದ ನಿರ್ಮಿಸಲಾದ ಮನೆಗಳ ಸಂಖ್ಯೆ ಎಷ್ಟು? ಹಾಗೂ ಎಂದಿನಿಂದ ಕಟ್ಟಲಾಗಿದೆ.